2. -"- 9.50ನೇ ಕಿ.ಮೀ. ನಲ್ಲಿ ಸೇತುವೆ ನಿರ್ಮಾಣ ರೂ. 15.00 ಲಕ್ಷ
3. ಬಳ್ಳಾರಿ- ಕಲ್ಯಾಣ ರಸ್ತೆಯ 9.10 ನೇ ಕಿ.ಮೀ.ನಲ್ಲಿ ಸೇತುವೆ ನಿರ್ಮಾಣ ರೂ. 12.40 ಲಕ್ಷ
4. ದೇವಲಾಪುರ-ಕಮಲಾಪುರ ರಸ್ತೆಯ 48.80 ಕಿ.ಮೀ.ನಲ್ಲಿ ಸೇತುವೆ ನಿರ್ಮಾಣ ರೂ. 10.00 ಲಕ್ಷ
5. ಎಲ್.ಎಮ್. ಟಿ.ಜಿ.ಕೆ.ಕೆ. ರಸ್ತೆಯ 116.10ನೇ ಕಿ.ಮೀ.ನಲ್ಲಿ ಸೇತುವೆ ನಿರ್ಮಾಣ ರೂ. 28.19 ಲಕ್ಷ
6. ಸಂಡೂರು-ಹೊಸಪೇಟೆ ರಸ್ತೆಯ 22.20 ಕಿ.ಮೀ. ನಲ್ಲಿ ಸೇತುವೆ ನಿರ್ಮಾಣ ರೂ. 72.75 ಲಕ್ಷ

ನಬಾರ್ಡ್ ವತಿಯಿಂದ ಆರಂಭಗೊಂಡ ಬ್ಯಾಂಕ್‌ಗಳು

1993 - ಶ್ರೀ ಹೆಚ್.ಡಿ. ಬಸವರಾಜ್ (ವಿರಾಜಪೇಟೆ) : ಮಾನ್ಯ ಉಪ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ನಬಾರ್ಡ್ ಆಶ್ರಯವತಿಯಿಂದ ರಾಜ್ಯದಲ್ಲಿ ಎಷ್ಟು ಬ್ಯಾಂಕುಗಳು ಆರಂಭವಾಗಿರುತ್ತದೆ.

2) ನಬಾರ್ಡ್ ವತಿಯಿಂದ ಪ್ರಾರಂಭಗೊಳ್ಳುವ ಬ್ಯಾಂಕುಗಳಿಂದ ರಾಜ್ಯದ ಜನತೆಗೆ ಯಾವ ಯಾವ ಪ್ರಯೋಜನ ಸಿಗುತ್ತದೆ. (ವಿವರ ನೀಡುವುದು) ?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :

ಅ) ನಬಾರ್ಡ್ ಆಶ್ರಯವತಿಯಿಂದ ರಾಜ್ಯದಲ್ಲಿ ಯಾವುದೇ ಬ್ಯಾಂಕುಗಳು ಆರಂಭವಾಗಿರುವುದಿಲ್ಲ. ಆದರೆ ದಿನಾಂಕ: 25-02-97 ರಂದು ಕರ್ನಾಟಕ ಕೃಷಿ ಅಭಿವೃದ್ಧಿ ಹಣಕಾಸು ಕಂಪನಿ ನಿಯಮಿತವನ್ನು ನಬಾರ್ಡ್‌ನ ವತಿಯಿಂದ ನೊಂದಾಯಿಸಲಾಗಿದೆ.

2) ಕೃಷಿ ಮತ್ತು ಹೈನುಗಾರಿಕೆಯ ವಾಣಿಜ್ಯೀಕರಣ, ನವೀಕರಣ ಮತ್ತು ವಿಸ್ತರಣೆಗಾಗಿ ರೈತರು ಮತ್ತು ಇತರ ಸಂಸ್ಥೆಗಳಿಗೆ ಸಾಲ ಸೌಲಭ್ಯ ಒದಗಿಸುವುದು ಕರ್ನಾಟಕ ಕೃಷಿ ಅಭಿವೃದ್ಧಿ ಹಣಕಾಸು ಸಂಸ್ಥೆಯ ಉದ್ದೇಶವಾಗಿರುತ್ತದೆ.

ಮೀನುಗಾರರಿಗೆ ಮನೆ ಕಟ್ಟಿಸಿಕೊಡುವ ವಿಚಾರ

1995- ಶ್ರೀ ಹೆಚ್ ಡಿ. ಬಸವರಾಜ್ (ವಿರಾಜಪೇಟೆ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೀನುಗಾರಿಕೆ ಇಲಾಖೆಯಿಂದ ಎಷ್ಟು ಜಿಲ್ಲೆಗಳಲ್ಲಿ ಮೀನುಗಾರರಿಗೆ ಮನೆ ಕಟ್ಟಿಸಿಕೊಡಲಾಗಿದೆ. ಹಾಗೂ ಅದಕ್ಕಾಗಿ ಎಷ್ಟು ಹಣ ವೆಚ್ಚ ಮಾಡಲಾಗಿದೆ? (1995-96, 1996-97ನೇ ಸಾಲಿನ ವಿವರ ನೀಡುವುದು)?